ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಕೆ. ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ೧೧ನೇ ಪಟ್ಟಿಯನ್ನು ಈ ಸಭೆಯ ಮುಂದಿಡುತ್ತೇನೆ.

ವಿಷಯ : ನೀಲಗಿರಿ ಗಿಡಗಳನ್ನು ಬೆಳೆಸಿದ್ದನ್ನು ನಿಷೇಧಿಸಲಾದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೩೯೬ (೬೭೮)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೀಲಗಿರಿ ಗಿಡಗಳನ್ನು ಬೆಳೆಸುವದಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡುವರೇ ಅಥವಾ ನೀಲಗಿರಿ ಗಿಡಗಳನ್ನು ಬೆಳೆಸುವದನ್ನು ಸರ್ಕಾರ ನಿಷೇಧಿಸಿದೆಯೇ ?

ಆ) ನೀಲಗಿರಿ ಗಿಡಗಳನ್ನು ಬೆಳೆಸುವುದರಿಂದ ಭೂಮಿ ಹಾಳಾಗುವುದೆಂದು ತಜ್ಞರು ಅಭಿಪ್ರಾಯ ಕೊಟ್ಟಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಈ. ಟಿ. ಶಂಬುನಾಥ (ರಾಜ್ಯ ಅರಣ್ಯ ಮಂತ್ರಿಗಳು) : ಅ) ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಪ್ರೋತ್ಸಾಹವನ್ನು ಕೊಡುವ ಯೋಜನೆಯು ಸರ್ಕಾರಕ್ಕಿಲ್ಲ. ಹಾಗೆಯೇ ನೀಲಗಿರಿ ಗಿಡಗಳನ್ನು ಬೆಳೆಸುವುದನ್ನು ಸರ್ಕಾರ ಇದುವರೆವಿಗೆ ನಿಷೇಧಿಸಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ವಿಷಯ : ಮಾರ್ಕೆಟುಗಳಲ್ಲಿರುವ ಹತ್ತಿ ಅಂಗಡಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೩೯೮ (೬೮೦)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ೧೯೬೦-೬೧ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಪ್ರತಿಯೊಂದು ಮಾರ್ಕೆಟ್ ಗಳಿಗೆ ಬಂದಿರುವ ಹತ್ತಿಯ ಅಂಡಿಗೆಗಳೆಷ್ಟು ? ಮಾರ್ಕೆಟ್‌ವಾರು ವಿವರ ನೀಡುವುದು.

೨) ಅವುಗಳಲ್ಲಿ ಸಿ. ಸಿ. ಐ. ದವರು ಯಾವ ಯಾವ ಮಾರ್ಕೆಟ್ಟಿನಲ್ಲಿ ಎಷ್ಟು ಎಷ್ಟು ಅಂಡಿಗೆಗಳನ್ನು ತೆಗೆದುಕೊಂಡಿರುವರು ?